ದಿನಾಂಕ **28.11.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು
<u>ಪಾಟೀ ಸವಾಲು</u>ಃ- ದೂರುದಾರರ ಪರ ಶ್ರೀ ಎಸ್ಎ ಸ್ ವಕೀಲರಿಂದಃ-

ನನ್ನ ಗಂಡ ಮತ್ತು ದೂರುದಾರರು ಸ್ನೇಹಿತರು ಎಂದರೆ ಸರಿ. ಆದೇ ರೀತಿ ನಾನು ಮತ್ತು ದೂರುದಾರರ ಪತ್ನಿ ಸ್ನೇಹಿತರು ಎಂದರೆ ಸರಿ. ಸುಮಾರು 17 ವರ್ಷಗಳಿಂದ ದೂರುದಾರರು ಮತ್ತು ಅವರ ಪತ್ನಿ ನಮಗೆ ಪರಿಚಯಸ್ಥರು. ದೂರುದಾರರು ಯಾರು ಯಾರಿಗೆ ಎಷ್ಟು ಎಷ್ಟು ಮೊತ್ತವನ್ನು ಸಾಲವಾಗಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ದೂರುದಾರರು ಫೈನಾನ್ಸ್ ಅಥವಾ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದು ಹೇಳಿರುವುದಿಲ್ಲ. ದೂರುದಾರರಿಗೆ ಅವರ ಊರಿನಲ್ಲಿ ಆಸ್ತಿ ಮತ್ತು ತೆಂಗಿನ ತೋಟ ಹಾಗೂ ಟ್ರ್ಯಾಕ್ಟರ್ ಇದೆ ಎಂದರೆ ಸರಿ.

ಸಾಮಾನ್ಯವಾಗಿ ಚೀಟಿ ವ್ಯವಹಾರ ಮಾಡಲು ಸರ್ಕಾರದಿಂದ ಪರವಾನಗೆ ಪಡೆಯಬೇಕು ಎಂದರೆ ಸಾಕ್ಷಿಯು ದೂರುದಾರರ ಹೆಂಡತಿ ಸಂಘದಲ್ಲಿ ಲೋನ್ ನೀಡುವ ರೀತಿಯ ಫೈನಾನ್ಸ್ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಸಂಘದ ಹೆಸರು ಗ್ರಾಮೀಣ ಕೂಟ, ಎಸ್ ಬ್ಯಾಂಕ್, ಐಡಿಎಫ್‌ಸಿ ಬ್ಯಾಂಕ್ ಎಂಬುದಾಗಿರುತ್ತದೆ. ದೂರುದಾರರ ಪತ್ನಿ ನಡೆಸುತ್ತಿದ್ದಾರೆ ಎಂದು ಹೇಳುವ ಸಂಘಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಪ್ರಕಾರ ನಾನು ದೂರುದಾರರ ಹೆಂಡತಿಯ ಜೊತೆ ಯಾವುದೇ ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಸಂಘದ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಾನು ದೂರುದಾರರ ಪತ್ನಿಯ ಜೊತೆ ಚೀಟಿ ವ್ಯವಹಾರ ಮಾಡುತ್ತಿದ್ದು ನಮ್ಮ ನಡುವೆ ಗಲಾಟೆಯಾದ ಕಾರಣ ಸದರಿ ಚೀಟಿ ವ್ಯವಹಾರವನ್ನು ನಾನು ಮುಕ್ತಾಯಗೊಳಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಸದರಿ ಚೀಟಿ ವ್ಯವಹಾರವನ್ನೇ ಸಂಘ ಎಂಬುದಾಗಿ ಹೇಳುತ್ತಿದ್ದೇನೆ. ಸದರಿ ಚೀಟಿ/ಸಂಘದ ವ್ಯವಹಾರದಲ್ಲಿ ದೂರದಾರರ ಹೆಂಡತಿಗೆ ಹಣ ಪಾವತಿ ಮಾಡಿರುವ ಬಾಬ್ತು ಯಾವುದೇ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಾನು ನನ್ನ 4 ಖಾಲಿ ಚೆಕ್‌ಗಳನ್ನು ದೂರುದಾರರ ಮನೆಗೆ ಹೋಗಿ ದೂರುದಾರರ ಪತ್ನಿಗೆ ಕೊಟ್ಟಿರುತ್ತೇನೆ. ಸದರಿ 4 ಚೆಕ್ ನೀಡುವಾಗ ದೂರುದಾರರ ಪತ್ನಿ, ನಾನು, ಮತ್ತು ಪುಷ್ಪಮ್ಮ ಎಂಬುವವರು ಇದ್ದೆವು. ಸದರಿ 4 ಚೆಕ್‌ಗಳನ್ನು ಲೋನ್ ತೆಗೆದು ಕೊಳ್ಳುವ ಉದ್ದೇಶದಿಂದ ನೀಡಿರುತ್ತೇನೆ. ಸದರಿ 4 ಚೆಕ್ ಗಳಿಗೆ ನಾನು ಸಹಿ ಮಾಡಿರಲಿಲ್ಲ.

ಈ ಕೇಸು ದಾಖಲು ಮಾಡುವ ಮೊದಲು ದೂರುದಾರರ ಅವರ ವಕೀಲರ ಮೂಲಕ ನಮಗೆ ಒಂದು ನೋಟೀಸು ಕಳುಹಿಸಿದ್ದರು ಎಂದರೆ ಸರಿ. ಆ ನೋಟೀಸು ನಮಗೆ ಜಾರಿಯಾಗಿತ್ತು ಎಂದರೆ ಸರಿ. ಸದರಿ ನೋಟೀಸ್ ಅನ್ನು ನನ್ನ ಗಂಡ ಓದಿ ತಿಳಿದುಕೊಂಡಿರತ್ತಾರೆ. ಸದರಿ ನೋಟೀಸಿಗೆ ನಾನು ಅಥವಾ ನನ್ನ ಗಂಡನಾಗಲೀ ಜವಾಬು ನೋಟೀಸು ನೀಡಿರುವುದಿಲ್ಲ. ನಾನು ನೀಡಿದ್ದ 4 ಚೆಕ್ ಗಳನ್ನು ದೂರುದಾರರ ಪತ್ನಿಯು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂಬ ವಿಚಾರ ನನಗೆ ವಕೀಲರ ಮೂಲಕ ಕಳುಹಿಸಿದ ನೋಟೀಸ್ ಅನ್ನು ನೋಡಿ ತಿಳಿದುಕೊಂಡಿರುತ್ತೇನೆ. ನನ್ನ 4 ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದುಕ ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ, ಬ್ಯಾಂಕಿಗೆ ಅರ್ಜಿ ನೀಡಿರುತ್ತೇನೆ. ಬ್ಯಾಂಕಿಗೆ ನೀಡಿದ ದೂರಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಿಪಿ 1 ರ ಚೆಕ್‌ನ ಮೇಲಿರುವ ಸಹಿ ನನ್ನದ್ದಲ್ಲ ಎಂದು ನಾನು ಹೇಳುತ್ತಿರುವ ಕಾರಣ ನಿಪಿ 1ಎ ಸಹಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆದುಕೊಳ್ಳಲು ನನ್ನ ಯಾವುದೇ ತಕರಾರು ಇರುವುದಿಲ್ಲ.

ನಾನು ನಮ್ಮ ಗೃಹಕೃತ್ಯದ ಅವಶ್ಯಕತೆಗೆಂದು ದೂರುದಾರರಿಂದ ರೂ.3 ಲಕ್ಷ ಹಣ ಸಾಲವಾಗಿ ಪಡೆದುಕೊಂಡು ಸಂಘದ ಬಾಬ್ತು ಚೆಕ್ ಗಳನ್ನು ನೀಡಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು ಸದರಿ 3 ಲಕ್ಷ ಸಾಲವನ್ನು ಮರುಪಾವತಿ ಮಾಡುವಂತೆ ಕೇಳಿದಾಗ ನಾನು ನಿಪಿ 1 ಚೆಕ್ ಅನ್ನು ಮರುಪಾವತಿಗಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರ ಪತ್ನಿಯ ಜೋತೆ ಯಾವುದೇ ಸಂಘದ ವ್ಯವಹಾರ ಮಾಡಿರುವುದಿಲ್ಲ, ಸಾಲ ಪಡೆದು ಅದನ್ನು ಮರುಪಾವತಿ

ಮಾಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ಎ ಸಹಿ ನನ್ನದ್ದೇ ಆಗಿರುತ್ತದೆ ಎಂದರೆ ಸರಿಯಲ್ಲ.

ದೂರುದಾರರ ಪತ್ನಿಯ ಮೇಲೆ ಒಂದು ಚೆಕ್ ಅಮಾನ್ಯ ಪ್ರಕರಣ ನಡೆಯುತ್ತಿದೆ ಎಂದು ನಾನು ಹೇಳಿದ್ದು, ಅದು ಯಾವ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದು ನನಗೆ ಗೊತ್ತಿಲ್ಲ, ಆದರೆ ಅದು ಕಡೂರಿನ ನ್ಯಾಯಾಲಯದಲ್ಲಿನಡೆಯುತ್ತಿದೆ. ಸದರಿ ಪ್ರಕರಣದ ದಾಖಲೆ ಅಥವಾ ಕೇಸಿನ ಸಂಖ್ಯೆ ನನ್ನ ವಕೀಲರಿಗೆ ನಾನು ಹೇಳಿರುವುದಿಲ್ಲ, ನನ್ನ ಸ್ನೇಹಿತರು ಹೇಳಿದ ವಿಚಾರವನ್ನು ನಾನು ಹೇಳಿರುತ್ತೇನೆ. ದೂರುದಾರರ ಪತ್ನಿ ಸಾಲ ಮಾಡಿಕೊಂಡಿರುತ್ತಾರೆ ಎಂದು ನಾನು ಹೇಳಿದ್ದು ಎಲ್ಲಿ ಯಾರ ಬಳಿ ಸಾಲ ಮಾಡಿಕೊಂಡಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಹಣವನ್ನು ಮರುಪಾವತಿ ಮಾಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.